# ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು ನಗರ

## ಸಿ.ಸಿ ನಂಃ 10213/2016

| | |
|---|---|
| ಸಾಕ್ಷಿದಾರರ ಹೆಸರುಃ | ಪ್ರಶಾಂತ್ ಕೆ.ಆರ್ |
| ತಂದೆಯ ಹೆಸರುಃ | ರಾಮೇಗೌಡ |
| ವಯಸ್ಸುಃ | 38 ವರ್ಷ |
| ಉದ್ಯೋಗಃ | ಮುಖ್ಯ ಪೇದೆ , ಕೋರಮಂಗಲ ಪೊಲೀಸ್ ಠಾಣೆ |
| ವಾಸಃ | ಆಡುಗೋಡಿ ಪೊಲೀಸ್ ಕ್ವಾಟ್ರರ್ಸ್ ಬೆಂಗಳೂರು |

**ದಿನಾಂಕಃ 06-01-2025 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ ಹಿರಿಯ ಸ.ಸ.ಅ ಅವರಿಂದಃ-**

1. 2009 ರಿಂದ 2017 ರವರೆಗೆ ಪೊಲೀಸ್ ಕಾನ್ಸ್‌ಟೇಬಲ್ ಆಗಿ ಮೈಕೊ ಲೇಔಟ್ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕಃ27-01-2016 ರಂದು ಚಾಸಾ-8 ರವರು ಈ ಪ್ರಕರಣದ ಆರೋಪಿಗಳನ್ನು ಪತ್ತೆ ಹಚ್ಚಿ ಹಾಜರುಪಡಿಸುವಂತೆ ನನಗೆ ಆದೇಶಿಸಿರುತ್ತಾರೆ. ನಾನು ನನ್ನ ಬಾತ್ಮಿದಾರರನ್ನು ಸಂಪರ್ಕಿಸಿ ಅವರಿಂದ ಬಂದ ಖಚಿತ ಮಾಹಿತಿಯಂತೆ ಬಿಳೆಕಳ್ಳಿ ಗ್ರಾಮದ, ವೀರಭದ್ರೇಶ್ವರ ದೇವಸ್ಥಾನದ ಹತ್ತಿರ ಇರುವ ಆರೋಪಿತರ

ಮನೆಗೆ ಹೋಗಿ ಮೂರು ಜನ ಆರೋಪಿತರನ್ನು ಹಿಡಿದು ಠಾಣೆಗೆ ಕರೆತಂದು ಚಾಸಾ–8 ರವರ ಮುಂದೆ ಹಾಜರುಪಡಿಸಿರುತ್ತೇನೆ. ಅದರ ಬಗ್ಗೆ ನನ್ನ ಹೇಳಿಕೆ ನೀಡಿರುತ್ತೇನೆ. ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**<u>ಪಾಟೀಸವಾಲು ಆರೋಪಿತರ ಪರ ವಕೀಲರಿಂದಃ–</u>**

3. 1 ಮತ್ತು 2 ನೇ ಆರೋಪಿತರು ಸಾಕಷ್ಟು ಸಾಮಾಜಿಕ ಚಟುವಟಿಕೆಗಳನ್ನು ಮಾಡುತ್ತಾರೆ ಎಂದರೆ ಸರಿ. 3 ನೇ ಆರೋಪಿಯು 2 ನೇ ಆರೋಪಿಯ ತಮ್ಮ ಎಂದರೆ ಸರಿ. ಆರೋಪಿತರನ್ನು ಪತ್ತೆ ಹಚ್ಚಲು ಚಾಸಾ–8 ರವರು ನನಗೆ ಲಿಖಿತ ಆದೇಶ ನೀಡಿರುವುದಿಲ್ಲ. ಆರೋಪಿತರನ್ನು ಪತ್ತೆ ಹಚ್ಚಲು ನನಗೆ ನೇಮಕ ಮಾಡಿಲ್ಲ ಮತ್ತು ನಾನು ಆರೋಪಿತರನ್ನು ಪತ್ತೆ ಹಚ್ಚಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಮನೆಗೆ ಹೋಗಿ ಆರೋಪಿತರನ್ನು ಪತ್ತೆ ಹಚ್ಚಿ ಚಾಸಾ–8 ರವರ ಮುಂದೆ ಹಾಜರುಪಡಿಸಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ಆರೋಪಿತರನ್ನು ಪತ್ತೆ ಹಚ್ಚಿ ಹಾಜರುಪಡಿಸಿದ ಬಗ್ಗೆ ವರದಿ ನೀಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ವರದಿಯನ್ನು ಕೊಡಬೇಕೆಂಬ ನಿಯಮ ಇಲ್ಲ ಎಂದು

ಹೇಳುತ್ತಾರೆ. ನಾನು ತನಿಖಾಧಿಕಾರಿಯ ಮುಂದೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ರಂಗೇಗೌಡ ಸಿ)
ಮು. ಮ. ದಂ. ನ್ಯಾ ಬೆಂ. ನಗರ.